ಶ್ರೀ

# ಅಮೂಲ್ಯ ರತ್ನವದು ರಾಮರತ್ನ
# ಮತ್ತು
# ಇತರ ಪದ್ಯಗಳು


ಲೇಖಕಿ :

ಜಗ್ಗು ಪ್ರಿಯದರ್ಶಿನಿ



ಸಂಪಾದಕರು ಮತ್ತು ಪ್ರಕಾಶಕರು :

ಜಗ್ಗು ಪ್ರಿಯದರ್ಶಿನಿ

10 ನೇ ಕ್ರಾಸ್, ಸೋಮೇಶ್ವರ ಎಕ್ಸ್‌ಟೆನ್ಷನ್

ತು ಮ ಕೂ ರು – 572 102

# ಅಮೂಲ್ಯ ರತ್ನವದು ರಾಮರತ್ನ

ಓ: ರಾಮಾ: ಎನ್ನ ಮನ ಮರ್ಕಟವು
ನಿನ್ನ ಬಳಿ ನಿಲ್ಲದದು
ಕೊಲ್ಲುವರು ಆರು ಹಗೆಗಳದನು
ನೀನೆಲ್ಲವನು ಬಲ್ಲೆ ಹರಿಯೇ
ಧೃಢ ಭಕುತಿಯ ಬಂಧನದಿ
ಬಿಗಿದಿರಿಸಿ ಕಾಪಾಡು...

ರಾಮಾ: ಎನ್ನ ಮನ ಪರದಾಡುವ
ಪಾದರಸದಂತೆ ನಿಂತಲ್ಲಿನಿಲ್ಲದದು
ರಾಮನೆಂಬ ದರ್ಪಣಕೆ ಲೇಪಿಸಿ
ಪ್ರಕಾಶಗೊಳಿಸಿ ಪ್ರತಿಬಿಂಬಿಸುವ
ತೆರದಿ ನೀಕೃಪೆ ಮಾಡು ಕೃಷ್ಣಾ

ಅಂತರಂಗವ ಅರಿತ
ಅಂತರ್ಯಾಮಿ ನೀನು
ಅಚಲ ಭಕುತಿಯ ಅರಿಯೆನಾನು
ಅರಘಳಿಗೆಯಾದರೂ ಕೊರಲು
ಬಿಗಿವಂತೆ–ರಾಮ–ರಾಮಾ...
ಎಂದೊರಲುವೆನು...
ತೊರೆಯದಿರು ತೊರೆಯದಿರು
ನೀ ಎನ್ನ ದೊರೆಯೇ:

ದುರಿತ ಕಷ್ಟಗಳಲಿ ದಾರಿಕಾಣದೆ
ಪೊರೆಯೆಂದು ಮೊರೆಯಿಡಲು
ಕರುಣವಾರಧಿ ಕಡೆಗಣಿಸದೆನ್ನ
ಕರಪಿಡಿದು ನೀ ಪೊರೆದೆ
ಈ ಪರಿಯ ಸಿರಿಯರಸ
ನೀ ಎನ್ನ ಪರಮ ಬಂಧವು
ಕಡೆತನಕ ಕಾಪಾಡು ಕೃಷ್ಣಾ..

ಅಂದು ಬಿಂದು ಉದಕವತಂದು
ನಿನಗೆಂದು ಅರ್ಪಿಸಲು ಬಂಧನದ
ಬೇಗೆಯಲಿ ಬೆಂದುನೊಂದೆ
ಇಂದು ಸಂದಿರುವ ಸಕಲ
ಸಂಪದವು ಸಂದೇಹವಿಲ್ಲ
ಅದುನೀನಿತ್ತ ಸಂಕೇತ...

ಕೋಟಿ ಕೋಟಿ ನರ ಕೀಟ
ಜನುಮಗಳ ದಾಟಿಬಂದರು
ಸಾಟಿಯಿಲ್ಲದ ನಿನ್ನಮಹಿಮೆಯ
ಪರಿ ಪಾಠವನು ಮರೆತು
ಜನನ ಮರಣಗಳ ಕಾಟದಲಿ
ಬೆಂದು ಬಸವಳಿದೆ
ಇಂದು ಸಂದಿರುವ ಈ
ಸುಸಮಯದಲಿ ಇನ್ನೆಂದೆಂದು
ನಿನ್ನ ಪಾದ ಪದುಮದ
ಸಂಬಂಧದಿಂದೆನ್ನ
ದೂರ ಸರಿಸದಿರು ಸ್ವಾಮಿ ॥

ಅದಾವ ಜನುಮದ ಪೂರ್ವ
ಸುಕೃತವೋ! ದೇವ ದೇವನೆ
ನಿನ್ನ ನೆನೆಯುವ ಭಾವ ಭಕುತಿಯ
ಭಾಗ್ಯಲಭಿಸಿದೆ ಭವದ ಬಂಧನ
ಭಯವ ಹಿಂಗಿಸಿ, ಪಾಪ ಫಲಗಳ
ಲೇಪವಳಿಸಿ ಕಾಪಿಡುವುದು
ಕರುಣಾಳು ಕರಿವರದಾ ॥

ಎಂದೋ ಎತ್ತಲೋ..
ಚಿತ್ತ ಶುದ್ಧಿಯಿಲ್ಲದೆ
ನಿನ್ನತ್ತ ಎಸೆದೊಂದು
ಕುಸುಮವು ನಿನ್ನ ಪಾದ

ಕಮಲದಲಿ ಬಿದ್ದು ಎನಗೊಂದು
ಸ್ಥಾನವನು ಕಾದಿರಿಸಿತು
ನಿನ್ನ ಅಪಾರ ಕರುಣೆಯ
ಅರಿಯೆನಾನು, ಕೃಪೆದೋರಿ
ನಿನ್ನ ಭಕ್ತಳೆಂದು ಒಪ್ಪಿರುವೆ ರಾಮಾ ॥

ಓ... ವಿಶ್ವರೂಪ: ನಿನ್ನ ಸೃಷ್ಟಿಯ
ಸಿಂಧುವಿನಲಿ ನಾನೊಂದು ಬಿಂದು
ಜೀವ ಕೋಟಿಯ ಅಪಾರದಲಿ
ಅಣುನಾನು, ನೀ ಸಲಹಿದ ಭಕ್ತರ
ಸರಿ ಸಮ ನಾನಲ್ಲ ಆದರೂ ನಿನ್ನ
ಕೃಪಾಭಿಕ್ಷೆಗಾಗಿ ಕಾದು ಕುಳಿತಿರುವ
ಭಿಕ್ಷು ನಾನು ಕೃಪೆದೋರಿ ಉದ್ಧರಿಸು ರಾಮಾ ॥

ಏನೊಂದರಿಯದ ಮೂಢ ಜೀವವಿದು
ಪುರಾಣ ಶಾಸ್ತ್ರಗಳ ಓದಿ ಅರಿಯೆ
ವ್ರತನೇಮ ಉಪವಾಸಗಳ ಮಾಡಲಾರೆ
ತೀರ್ಥಯಾತ್ರೆಗಳಿಗೆ ನಡೆಯಲಾರೆ
ಕುಳಿತಲ್ಲಿ ಇರುವಲ್ಲಿ ನಿನ್ನ ನೆನೆಯುವೆ
ಶರಣಾಗತಿಯೊಂದೆ ಸುಲಭ ವ್ರತ ॥

ಭಕ್ತಿಯೆಂಬುದು ಆಡಂಬರದ ಸೋಗಲ್ಲ
ಭಗವಂತನಿಗೂ ಭಕ್ತನಿಗೂ ನಿಕಟ ಸಂಬಂಧ
ಏಕಾಗ್ರದಲಿ ಮನವ ನಿಲಿಸಿ ಕರೆದೊಡೆ
ತಾ ಬಂದು ಸಲಹುವ ಸುಲಭ ಸಖನವನು
ಭಕ್ತಿಯೆಂಬುದು ಪತಿ ಪತ್ನಿಯರ ಪ್ರೇಮದಂತೆ ॥

ತನು ಸವೆದಿದೆ ಮನ ಸೋತಿದೆ ದಿನ ದಿನವು ಜಂಜಟದಿಕಳೆಯುತಿದೆ
ಸೋರುತಿಹ ನೀರನ ಗಡಿಗೆಯ ತೆರದಿ ನಮ್ಮಾಯುಷ್ಯವು ಸರಿಯುತಿದೆ
ಮರಣ ಕಾಲವು ಬೆಂಬತ್ತಿ ಬರುತಿದೆ ಸ್ಮರಣೆಕೊಡು ಸದಾಸರ್ವೇಶ
ರಾಮಾ ॥

ಕಾಪಾಡು-ಕಾಪಾಡು ಎಂದು ನುಡಿ-ನುಡಿಗೆ ಕಾಡಿ ಬೇಡುವ
ಎನ್ನ ಕಾಟವ ತಾಳಲಾರದೆ ಕಣ್ದೆರೆದು ನೋಡಿ ಕಡುಪಾಪಿ
ನೀನೆಂದು ಕಡೆಗಣಿಸದೆ ನಿನ್ನಡಿಯ ಆಶ್ರಯವೆ
ನೀಡಿರುವೆ ನರಹರಿಯೇ ॥

ಬವಣೆಗಳರಿಯದ ಬಾಲ್ಯ ಬಹು ಬೇಗ ಕಳೆಯಿತು
ಯೌವ್ವನವು ಕಾಮ ಮೋಹದಿ ಕಳೆಯಿತು ಮುಪ್ಪು ಬಂದಾಗ
ನಿನ್ನ ನೆನೆಯುವನೆಂಬ ಹುಸಿಯಾಸೆ ಕೈಲಾಗದೆಂಬ
ನೆಪದಿಂದ ಕಳೆಯಿತು ಇನ್ನು ನಿನಗಾಗಿ ಹಂಬಲಿಸುವ
ದಿನ ಬೇರೊಂದುಂಟೇ? ನಾನರಿಯೆ ನರ ಹರಿಯೇ ॥

ನಿನ್ನ ಮಾಯೆಯ ಬಲೆಯಬೀಸಿ ಅದರೊಳು ಆಸೆ ಆಮಿಷಗಳ
ಕಾಳನೆರಚಿ ಎನ್ನಮನ ಸೆಳೆದು ಬಂಧನದಿ ಸಿಲುಕಿಸಿ ನೊಂದು
ದಿಕ್ಕು ಕಾಣದ ಹಕ್ಕಿಯ ತೆರದಿ ಎನ್ನ ಭವದ ಬಂಧನದಿ ಸಿಲುಕಿಸಿ
ಪರಿಕಿಸ ಬೇಡ ಪರಮಪ್ರಭೂ ॥

ಕಾನನದಿ ಬೆಳೆದಿಹ ಬಳ್ಳಿಗೆ ಮರದ ಆಶ್ರಯ ಬೇಕು
ಥಳ ಥಳಪ ಮೀನಿಗೆ ನೀರಿನಾಶ್ರಯ ಬೇಕು
ಕಾದಿರುವ ಚಕೋರಕ್ಕೆ ಚಂದ್ರಮನು ಬೇಕು
ಅರಳುವಾ ಕಮಲಕ್ಕೆ ರವಿಯ ಆಶ್ರಯ ಬೇಕು
ಮೋಕ್ಷದಾಯಕ ಹರಿಯೆ ನಿನ್ನಾಶ್ರಯವು ಎನಗೆಬೇಕು ॥

ನೀ ಯಾರ ಸಲಹಿದೆಯೋ ಅದನರಿಯೆ
ನೀ ಯಾರ ಉದ್ಧರಿಸಿದೆಯೋ ನಾಕಾಣೆ
ನಿನ್ನ ಭಕ್ತರು ನಿನ್ನ ಹಾಡಿ ಹೊಗಳಿ
ಭಕ್ತ ವತ್ಸಲನೆಂಬ ಬಿರುದನಿತ್ತಿಹರು
ಅದನಂಬಿ ನಾನಿನ್ನ ಮರೆಹೊಕ್ಕೆ ಹರಿಯೇ
ನಿನ್ನ ಬಿರುದಾವಳಿಯ ನೀನುಳಿಸಿ ಕೋ ॥

ಅಣು-ರೇಣು ತೃಣಗಳಲಿ ನೀನಿರುವೆಯಂತೆ ಪಾಪಿ
ಅಜಮಿಳನ ಪೊರೆದೆಯಂತೆ ಗಜರಾಜ ಮೊರೆಯಿಡಲು

ಓಡೋಡಿ ಬಂದೆಯಂತೆ ಪಾಂಡವರ ಪತ್ನಿ ಪಾಂಚಾಲಿ
ನೆರೆನಂಬಿ ಕೃಷ್ಣಾ: ಎಂದೊಡನೆ ಅಕ್ಷಯ ವಸ್ತ್ರವ ನಿತ್ತೆಯಂತೆ
ಈ ಪರಿಯಲಿ ಪೊರೆವ, ಪರಮ ದಯಾಘನನೆಂದು ನಾ ನಿನಗೆ
ಶರಣಾದೆ ನರ ಹರೀಯೇ ॥

ಅರುಣೋದಯದೊಳೆದ್ದು ಮಾಧವನ ಪದ ಪಂಕಜದ
ಮನಸಾರೆ ನೆನೆ-ನೆನೆದು ತನು ಮನ ಶುದ್ಧಿಯಲಿ
ದಿನ-ದಿನದ ಕಾಯಕರ್ಮವ ದೇವ ನಿನಗರ್ಪಿತ ವೆನಲು
ಅವಗಿಲ್ಲ ನರಕ ಭಯ ಇದುವೆ ಶ್ರೀಕೃಷ್ಣಗೀತೆಯಲಿ
ಹೇಳಿರುವ ತತ್ವ ರಹಸ್ಯವಿದು.

ರಾಮ ನಾಮಕೆ ಸರಿದೂಗುವ ಮಂತ್ರ ಪುರಾಣಗಳ ನಾಕಾಣೆ
ಸಕಲ ಶಾಸ್ತ್ರಗಳ ಸಾರ ರಾಮನಾಮ ಕುಲ ಕೋಟಿಗಳ
ಉದ್ಧರಿಸುವನಾಮ
ಕಲಿಯುಗದ ಕಲ್ಪತರು ರಾಮನಾಮ ವಿಭೀಷಣಗೆ ಅಭಯವಿತ್ತ ನಾಮ
ಭಕ್ತ ಹನುಮ ಸದಾನೆನೆಯುವ ನಾಮ ಅದೇ ರಾಮ ನಾಮವೆನಗೆ
ತಾರಕ ಮಂತ್ರ ಮುಕ್ತಿ ॥

ಹಾವು ಏಣಿ ಆಟವಯ್ಯಾ ಕೃಷ್ಣಾ: ನನಗೂ ನಿನಗೂ ಹಾವು ಏಣಿ
ಆಟಗರಬಿದ್ದರೆ ನಾ ಗೆದ್ದೆ ಕೃಷ್ಣಾ
ನೂರು ಬಾರಿ ಏಣಿ ಹತ್ತಿ ಜಾರಿ-ಜಾರಿ ಬಿದ್ದೆನಯ್ಯಾ: ಹಾವು ಎನ್ನ
ನುಂಗಿತು
ಮತ್ತೆ ಮತ್ತೆ ಹತ್ತಿ ಬರಲು ಸೋತೆನಯ್ಯ ಪರಮ ಪದ ಸೋಪಾನ
ಬಲು ಎತ್ತರ
ಎತ್ತರದ ಏಣಿ ಹತ್ತಲಾರದೆ ಜಾರಿದೆ ಧೃಢಭಕುತಿಯಲಿ ನಿನ್ನ ನಂಬಿ
ಕಡೆವರೆಗು ಕಷ್ಟದಲಿ ಬಂದಿರುವೆ ಅಲ್ಲಿ ಮತ್ತೆ ಘಟ ಸರ್ಪಕಾದಿಹುದು
ಬೇಡ ಕೃಷ್ಣ ಬೇಡ ಮತ್ತೆತಳ್ಳ ಬೇಡ ಇನ್ನೆರಡು ಮೆಟ್ಟಲಿದೆ ವೈಕುಂಠಕ್ಕೆ
ಕೃಪೆದೋರಿ ಕಡೆಹಾಯಿಸು ಕೃಷ್ಣಾ ಇನ್ನು ಸಾಕು ಹಾವು-ಏಣೆ ಆಟ
ನಾ ಸೋತೆ ಪರಮಪದಕೆನೀನೆ ಕೃಪೆಮಾಡಿ ಕರೆದೊಯ್ಯೋ ಕೃಷ್ಣಾ ॥
ದೇವ ನೀನೆಲ್ಲಿಹೆಯೆಂದು ಸಂದೇಹ ವೇಕೆ?

ಅರಳಿದಾ ಕುಸುಮಗಳಲಿ ಪರಿಮಳವು ನೀನೇ
ಅರುಣರಾಗದಿ ರಂಜಿಸುವ ರವಿಯಲ್ಲು ನೀನೇ
ಜೀವಕೋಟಿಯ ಪ್ರಾಣ ವಾಯುದೇವನು ನೀನೇ
ದೇವನೀನೆಲ್ಲಿಹೆಯೆಂದು ಸಂದೇಹವೇಕೆ?

ತಿಲದೊಳಡಗಿರುವ ತೈಲದಂತೆ ಹಾಲಿನೊಳಡಿಗಿರುವ ಬೆಣ್ಣೆಯಂತೆ
ಬೀಜದೊಳಗಿರುವ ವೃಕ್ಷದಂತೆ ಹೂವಿನೊಳಿರುವ ಮಧುವಿನಂತೆ
ಮೇಘದೊಳಿರುವ ಮಳೆಯಂತೆ ಜೀವ ಜೀವಗಳಲಿ ಆ ದೇವನಿರುವ ॥
ದೇವ ನೀನೆಲ್ಲಿಹೆಯೆಂದು ಸಂದೇಹವೇಕೆ?

ವೀರ್ಯದ ಅಣುಬಿಂದು ಆಕಾರ ತಳೆದು
ಗರ್ಭ ಕೋಶದಿ ಬೆಳೆದು ಶಿಶುರೂಪ ತಾಳಿ
ರೂಪಗುಣ ಸ್ವಭಾವಗಳ ಮೈತಳೆದು
ಧರೆಗಿಳಿವ ಮಾನವ ಸೃಷ್ಟಿ ಕರ್ತ ನೀನೇ,
ದೇವ ನೀನೆಲ್ಲಿಹೆಯೆಂದು ಸಂದೇಹವೇಕೆ?

ಕರುಳ ಕಂದನ ತೊಡೆಯೊಳಿಟ್ಟು ಮೊಲೆಯೂಡಿ ಕುಡಿವ ಹಸುಳೆಯ
ಕುರುಳ ನೇವರಿಸಿ ಬಿಗಿದಪ್ಪಿನೇಹದಿ ಮಮತೆಯ ಸೂಸುವ ಮಾತೆಯ
ಪ್ರೀತಿ ನೀನೇ
ದೇವ ನೀನೆಲ್ಲಿಹೆಯೆಂದು ಸಂದೇಹವೇಕೆ?

ಹಾಲುಗಲ್ಲದ ಹಸುಳೆಯಾ ಚಲುವ ಚಂದುಟಿಯಲ್ಲಿ
ಮುಗ್ಧ ಮುಗುಳ ನಗುವನು ಕಂಡು ಮನಹಿಗ್ಗಿ ದೇವ
ನೀನಿಲ್ಲಿಹೆಯೆಂದು ನಾ ತಿಳಿದೆ ಕಳ್ಳ ಕಪಟವನರಿಯದಕಂದನ
ಕಣ್ಣನೋಟದಲಿ ನಾಕಂಡೆನಿನ್ನ

ಓ: ದೇವಾ ನಾ ನಿನ್ನ ಅದಾವ ರೂಪದಲಿ ನೆನೆಯಲಿ?
ಚಿತ್ರ ಕಲಾವಿದನ ಕುಂಚದಲಿ ರಂಜಿಸಿದ ಕಲಾಕೃತಿ
ಕಣ್ಮನ ಸೆಳೆಯುವ ಕೊಳಲ ಪಿಢಿದ ಕೃಷ್ಣನ ಆ ಮೋಹಕ
ರೂಪ ಎನ್ನ ಮನ ಸೆಳೆದು ಹೃದಯದಲಿ ನೆಲೆಗೊಳಿಸಿ
ಆ ಚಿತ್ರದಲಿ ನಿನ್ನ ರೂಪವಕಂಡೆ ॥

## ದೇವನೀನೆಲ್ಲಿಹೆಯೆಂದು ಸಂದೇಹ ವೇಕೆ?

ಝುಳ-ಝುಳನೆ ಹರಿಯುವ ಯಮುನಾ ತೀರದಲಿ
ಕಾತುರದ ನೋಟದಲಿ ಅತ್ತಿತ್ತ ನೋಡುತ್ತ
ತನ್ನ ಪ್ರಿಯತಮ ಮಾಧವನಿಗಾಗಿ
ಕಾದು ಕುಳಿತಿರುವ ವಿರಹಿರಾಧೆಯ
ಭಾವ ಭಂಗಿಯನು ಚಿತ್ರದಲಿಮೂಡಿಸಿದ
ಕಲಾವಿದನ ಕಲ್ಪನೆಗೆ ನಾ, ಮನಸೋತು ಆ.
ರಾಧೆಯ ತನ್ಮಯಭಾವ ಎನಗಾಯ್ತು ಕೃಷ್ಣಾ ॥
ಆ ಚಿತ್ರದಲಿ ನಿನ್ನಿರವಕಂಡೆ

ಗಾನ ರಾಗ ತಾಳ ಸಂಗೀತ
ಮಾಧುರ್ಯದಲಿ ನಿನ್ನಿರವ ನಾಕಂಡೆ,
ಸುಮಧುರ ಗಾನಸುಧೆಯ ಸವಿಯುವ
ಸಮಯದಿ ನೀಗಾನ ಲೋಲನೆಂಬ ಕಲ್ಪನೆಯ
ಆನಂದ ಎನಗಾಯಿತು ಕೃಷ್ಣಾ ।
ದೇವ ನೀನೆಲ್ಲಿಹೆಯೆಂದು ಸಂದೇಹವೇಕೆ?

ನಿಗಮ ಗೋಚರ ನಿರಾಕಾರ ಜಗದೊಡೆಯ ದೇವ ನೀನು
ಶಿಲ್ಪಿಯು ಕಲ್ಪನೆಯಲಿ ಕೆತ್ತಿದ ಸುಂದರ ಸಾಕಾರ ಮೂರ್ತಿಯಾಗಿ
ಮಂದಿರಗಳಲಿ ನೆಲೆಸಿರುವೆ ಭಕ್ತಿ ಭಾವದಿ ಅರ್ಚಿಸಿ ಪೂಜಿಸಿ
ಅರ್ಚಾವತಾರದ ಮೂರ್ತಿಯಲಿ ನಿನ್ನಿರವ ನಾಕಂಡೆ ದೇವ
ನೀನೆಲ್ಲಿಹೆಯೆಂದು ಸಂದೇಹವೇಕೆ?

ಗೋಕುಲವಾಸ ಗೋಪಾಲಕೃಷ್ಣ ಯಶೋದಾನಂದನ ನಂದಗೋಪ
ಆನಂದಕಂದ ಮಂದರಗಿರಿಧರ ಬೃಂದಾವನ ವಿಹಾರ ರಾಧಾ ಮಾಧವ
ವ್ರಜವನಿತಾಜನಮನೋವಿಹಾರಿ ಲೀಲಾವಿನೋದ ಬಾಲಕೃಷ್ಣ
ಮುರುಳೀ ಮನೋಹರ ದೇವಾ: ನಿನ್ನಿರವ ನಾಕಂಡೆ ಆ ಗೋಕಲದಲಿ
ನೀನೆಲ್ಲಿಹೆಯೆಂದು ಸಂದೇಹವೇಕೆ?

ನಿನ್ನ ಪಾದ ಧೂಳಿಯ ಪಡೆದ ಭೂತಾಯಿ ಧನ್ಯೆ ಪುಣ್ಯಭೂಮಿ
ಗೋಕುಲ, ಪಾವನವಾಯ್ತು ಗೋಕುಲವಾಸ ಗೋವಿಂದಾ:
ನೀವಾಸಿಸಿದಗೋಕಲ ದರ್ಶನ ಎನಗಾಯ್ತು ಸಾಧನ್ಯೆ ನಿನ್ನ
ಪಾದರಜ ಶಿರದಲಿ ಧರಿಸಿ ಪಾವನಳಾದೆ ನಿನ್ನ ಸಾನ್ನಿಧ್ಯ
ಗೋಕುಲದಲಿರುವುದ ನಾಕಂಡೆ ನೀನೆಲ್ಲಿಹೆಯೆಂದು ಸಂದೇಹವೇಕೆ?

**ರಚಿಸಿದ್ದು ಜಗ್ಗುಪ್ರಿಯದರ್ಶಿನಿ**

# ಓ ಕಾಲ ಪುರುಷಾ

ಓ... ಕಾಲ ಪುರುಷಾ:
ನಿನ್ನ ಓಟ ಸಾಗುತಿದೆ ಮುಂದೆ ಮುಂದೆ
ದಿನ ದಿನವು ಕಳೆದು
ಯುಗ ಯುಗವು ಮರುಳುತಿದೆ
ನಿನ್ನ ಓಟಕೆ ಅಡೆ-ತಡೆಯಿಲ್ಲ
ಆದರೆ ನಿನ್ನ ಗರ್ಭದಲಿ ಹುಟ್ಟಿ
ಅಳಿದಳಿದು ಹೋಗುವ
ಹುಲುಮಾನವನಿಗೆ ಕಾಲದ
ಮಿತಿಯುಂಟೆಂದು ನೀಎಚ್ಚರಿಸು
ಓ... ಕಾಲ ಪುರುಷಾ:

ಕಾಲ ಕಬಳಿಸುವ ಮುನ್ನ
ಸಾವನಪ್ಪುವ ಮುನ್ನ
ನೀ ನಡೆದು ಬಂದ ದಾರಿಯ
ನೊಂದುಬಾರಿ ಹಿಂದಿರುಗಿ ನೋಡು
ಕಾಲ ಕೆಟ್ಟಿತು ಎಂದು
ಕಾಲದ ಮೇಲೇಕೆ ಗೂಬೆ
ಕೂರಿಸುವೆ? ಕಾಲ ಕೆಟ್ಟಿಲ್ಲ
ಕೆಟ್ಟಿರುವುದು ಮಾನವನ
ಬುದ್ಧಿ ಎಂದೆಚ್ಚರಿಸು
ಓ... ಕಾಲ ಪುರುಷಾ:

ಮಾನವನು ದಾನವನಾಗುತಿಹನು
ಹಿಂಸಾಚಾರ, ಕೊಲೆ, ನರಮೇಧ
ಹತ್ಯಾಕಾಂಡಳಿಂದ ತತ್ತರಿಸುತಿದೆ ಮನುಕುಲ,
ಬಡಜನರ ಬಾಯ್ಬಡಿದು
ಸುಳಿದು ಸುಖದ ಸುಪತ್ತಿಗೆಯಲಿ
ಓಲಾಡುವ ಸ್ವಾರ್ಥ ಪರರಿಗೆ ಕೊನೆಯಿಲ್ಲ
ಹಾಲುಗಲ್ಲದ ಹಸುಕಂದ
ಕಾಮುಕನ ಅತ್ಯಾಚಾರಕೆ ಬಲಿ
ನೊಂದವರ ಆಕ್ರಂದನ
ಮುಗಿಲ ಮುಟ್ಟುತಿದೆ
ಮಾನವರಾಗಿ ಬಾಳೆಂದು ನೀ ಎಚ್ಚರಿಸು
ಓ... ಕಾಲ ಪುರುಷಾ:

ದೈವದೃಷ್ಟಿಯಧಿಕ್ಕರಿಸಿ ಮಾನವನದೃಷ್ಟಿ
ವಿಜ್ಞಾನದತ್ತ ವಿಜೃಂಭಿಸುತ್ತಿದೆ
ಪ್ರಕೃತಿಯ ಗೆಲ್ಲುವೆನೆಂಬ
ಸವಾಲು ಸೋತಿದೆ
ನೆಲ ನೀರಿಗೆ ಹಾಹಾಕಾರ
ಕಾಡಕಡಿದು ಬೀಜ ನೆಡುವ ಬುದ್ಧಿವಂತಿಕೆ
ಸಾಗರದ ನೀರನು ಸಿಹಿಯಾಗಿಸುವ ತಂತ್ರ
ಯಂತ್ರ ಮಾನವನ ಹಾರಾಟ
ಇವಕೆಲ್ಲ ಹಣದಹೊಳೆ
ಹರಿಸುತಿದೆ ವಿಜ್ಞಾನ
ಕೂಳಿಗೆ ಗತಿಯಿಲ್ಲದ
ಬಡಜನರ ಬಾಳು ಗೋಳಾಗಿದೆ
ಮತ್ತೆ ಉತ್ತಮರು ಅವತಾರವೆತ್ತುವರೆ
ಓ... ಕಾಲ ಪುರುಷಾ:

**ರಚಿಸಿದ್ದು ಜಗ್ಗುಪ್ರಿಯದರ್ಶಿನಿ**

# ಅಮರ ವೀರ ನೇತಾಜಿ

ಭಾರತಮಾತೆಯು ನೊಂದು ಬೆಂದಳು
ಪರಕೀಯರ ಪರಿಪರಿ ಬಂಧನದಿ
ದಾಸ್ಯವ ಹರಿಸುವ ಪುತ್ರನ ಕಾಣದೆ
ಕಣ್ಣೀರಿಟ್ಟಳು ಕಳವಳದಿ ॥1॥

ಕೋಟಿ ಕೋಟಿ ಸಂತಾನವ ಪಡೆದರು
ಸಾರ್ಥಕವಿಲ್ಲದ ಸಂಖ್ಯೆಗಳೇಕೆ?
ಸಾವಿರಕೊಬ್ಬ ವೀರನೆ ಸಾಕು
ಸ್ವಾತಂತ್ರ ಗಳಿಸುವ ಧೀರನೆಬೇಕು ॥2॥

ಮಾತೆಯ ಹಂಬಲ ಹುಸಿಯೆನಲ್ಲ
ಜನಿಸಿದನೊಬ್ಬನು ಅಂತಹ ಧೀರ
ಆತನೆ ನೆಚ್ಚಿನ ನೇತಾಜಿ ವೀರ
ಆತನೆ ಮೆಚ್ಚಿನ ಸುಭಾಷ ಚಂದ್ರ ॥3॥

ಭಾರತ ಮಾತೆಯ ಮಣಿಮುಕುಟದಲಿ
ವಿರಾಜಿಸುತ್ತಿಹ ರತ್ನಗಳೆನಿತೋ
ಅಂತಹದೊಂದು ಅಮೂಲ್ಯ ರತ್ನ
ಸುಭಾಷ ಚಂದ್ರ ನಾಡಿನ ಪುತ್ರ ॥4॥

ಈತನ ಚರಿತೆಯ ಅರಿಯದ
ಮನುಜರ ಜನುಮವೆ ಬರಿದು
ಮಾತೆಯ ದಾಸ್ಯವ ಹರಿಸಲು ತಾನು
ಸತತವು ದುಡಿದನು ತನು–ಮನದಿ ॥5॥

ನೇತಾಜಿ ಜನಿಸಿದ ಪುಣ್ಯದದಿನವದು
ಹದಿನೆಂಟುನೂರ ತೊಂಭತ್ತ ಏಳು
ಜನವರಿ ಇಪ್ಪತ್ತಮೂರರಲಿ
ಕಟಕ್ ಪಟ್ಟಣದಿ ಜನಿಸಿದನು ॥6॥

ಪುಣ್ಯವತಿ ಪ್ರಭಾವತಿದೇವಿ ಈತನ ಮಾತೆ
ಬಹದ್ದೂರ್ ಜಾನಕಿನಾಥನೆ ಪಿತನು
ಹಿಂದೂಧರ್ಮದ ಮನೆತನ ಅವರದು
ಎಂದೆಂದಿಗು ಅಳಿಯದ ಆದರ್ಶ ॥7॥

ಓ.. ಧೀರ ಸುಭಾಷ ಚಂದ್ರಾ
ನೀನೊಬ್ಬ ವೀರ ನರೇಂದ್ರ
ನಿನ್ನ ಮನ ದೇಶ ಭಕ್ತಿಯ ಕೇಂದ್ರ
ದಾಸ್ಯದ ಕತ್ತಲ ಹರಿಸಿದ ಚಂದ್ರ ॥8॥

ಬಾಲ್ಯದಿಂದಲೆ ನೀ ಬಲು ಅಭಿಮಾನಿ
ಆತ್ಮಶೋಧನೆ ಅರಸಿ ಹಿಮಾಲಯದತ್ತ
ನಡೆದಲೆದು ಕಷ್ಟಗಳ ಲೆಕ್ಕಿಸಿದೆ
ಕಠಿನ ತಪವೆಸಗಿದ ಅಸಮ ಸಾಹಸಿ ನೀನು ॥9॥

ಮೂರು ಶತಮಾನಗಳ
ಭಾರತದ ದಾಸ್ಯವನು
ದೂರ ಸರಿಸಲು ಅವತಾರ
ವೆಸಗಿದ ಧೀರ ಸುಭಾಷ್ ॥10॥

ಭಾರತದಲಿ ಬೇರೂರಿದ್ದ
ಆಂಗ್ಲರ ಅಧಿಕಾರವನು
ಬುಡ ಸಹಿತ ಅಲ್ಲಾಡಿಸಿದ
ಅತಿ ಚತುರ ವೀರ ನೀನು ॥11॥

"ಆಜಾದ್ ಹಿಂದ್" ಪೌಜನೆಕಟ್ಟಿ
ಆಂಗ್ಲರ ಎದೆಯ ನಡುಗಿಸಿದೆ
ಆ ಸರಕಾರವೆ ಸೆರೆಮನೆಗಟ್ಟಿತು
ಕಾರಣವಿಲ್ಲದೆ ಅಡಿಗಡಿಗೆ ॥12॥

ಆದರೆ ಏನು ಅದಕೆಲ್ಲ ಜಗ್ಗದ
ಅಚಲ ಛಲದಂಕ ಮಲ್ಲನೀನು
ಅವರೆಲ್ಲರ ಕಣ್ಣ ತಪ್ಪಿಸಿ ಹೊರ
ನಾಡಿನಲ್ಲೇ ದುಡಿದೆ ತಾಯ್ನಾಡಿಗೆ ॥13॥

ನೀನಿಟ್ಟ ದಿಟ್ಟ ಹೆಜ್ಜೆ
ಇಂದಿಗೂ ಗಟ್ಟಿ ಗುರುತು
ನೀ ತೊಟ್ಟ ವೀರ ಪಣವೇ
ನಮ್ಮೆಲ್ಲರ ದಾರಿ ದೀವಿಗೆ ॥14॥

ತಾಯ್‌ನಾಡ ಬಿಡುಗಡೆಗಾಗಿ
ನೀ ದುಡಿದೆ ಹಗಲಿರುಳು
ಕಲಿಯುಗದ ಕಡುಗಲಿ ನೀನು
ಕೆಚ್ಚೆದೆಯ ಬಿಚ್ಚಿ ತೋರಿದೆ ॥15॥

ಮಹಾತ್ಮ ಗಾಂಧಿಯ ಅಹಿಂಸವಾದವ
ಸಹಿಸದ ನೀ ಸಂಗ್ರಾಮ ಕ್ರಾಂತಿಯ
ಸಾರಿ ಸಾವಿರ ಗಟ್ಟಲೆ ಸೇನೆಯ ಸೇರಿಸಿ
ಸಾಧನೆಯ ಗುರಿಯತ್ತಸಾಗಿದೆ ನೀನು ॥16॥

ನಿನ್ನ ಮಾತಿನಲಿ ಮೋಡಿಯಿತ್ತು
ಕೇಳಿದವರ ಮನ ನಿನ್ನತ್ತ ಒಲಿಯಿತು
ಜೀವದ ಹಂಗ ತೊರೆದು ಹೋರಾಡಲು
ನೆತ್ತರ ಕ್ರಾಂತಿಯ ಪಣ ತೊಟ್ಟರು ಅವರು ॥17॥

ಓ... ಎಮ್ಮ ನೆಚ್ಚಿನ ಸುಭಾಷ್
ನೀ... ಒಮ್ಮೆ ಎಚ್ಚರಿಸಿದ ಘೋಷ
ನಿನ್ನ ನೆಚ್ಚಿನ ಭಾರತೀಯರ
ಕೆಚ್ಚೆದೆಯಲಿ ಅಚ್ಚಳಿಯದಿದೆ ॥18॥

ಪರಕೀಯರ ದಬ್ಬಾಳಿಕೆಯೆ
ಪರಮ ಹಿತವೆಂದು ಹಿಗ್ಗಿ
ಕುರಿಗಳಂತಿದ್ದ ಭಾರತೀಯರಲಿ
ಹುರಿದುಂಬಿಸಿ ಅರಿವ ಮೂಡಿಸಿದೆ ॥19॥

ಭಾರತಾಂಬೆಯ ದಾಸ್ಯಹರಿಸಲು
ದಾರಿ ತೋರಿದ ವೀರಯೋಧ ನೀನು
ಸ್ವಾತಂತ್ರ್ಯವೇಸ್ವರ್ಗ ದಾಸ್ಯವೇನರಕ
ಎಂಬ ತತ್ವವ ನೀ ಎತ್ತಿ ಹಿಡಿದೆ ॥20॥

ಭಾರತಾಂಬೆಯ ಮಕುಟ ಮಣಿನೀನು
ನಿನ್ನ ಕಣ–ಕಣವು ನಾಡಿಗಾಗಿಕೊಡಿಗೆ
ಕಡೆಯುಸಿರವರೆಗೂ ನೀ ದುಡಿದೆ
ಮಾತೆಯ ಮಡಿಲಲಿ ನೀ ಮಡಿದೆ ॥21॥

ಓ... ಎಮ್ಮ ನೆಚ್ಚಿನ ನೇತಾಜೀ..
ಇಂದು ನೀನಿಲ್ಲದೇ ಕಣ್ಮರೆಯಾದೆ
ನಿನ್ನ ಹೆಮ್ಮೆಯ ಭಾರತವ
ನೀ ಮತ್ತೊಮ್ಮೆ ಬಂದು ನೋಡು ॥22॥

**1977ನೇ ಕನ್ನಡ ರಾಜ್ಯೋತ್ಸವದ ಕಾಣಿಕೆ**

**ರಚಿಸಿದ್ದು ಜಗ್ಗುಪ್ರಿಯದರ್ಶಿನಿ**

# ಶಿಬಿಯ ತ್ಯಾಗ

ಶಿಬಿಯು ಒಬ್ಬ ರಾಜನಂತೆ
ಅವನು ಬಹಳ ದಾನಿಯಂತೆ
ದಯೆಯೆ ಅವನ ಧರ್ಮವಂತೆ
ತ್ಯಾಗ ವವನ ಜೀವವಂತೆ

ಮೂರು ಲೋಕ ಹೊಗಳಿತಂತೆ
ಶಿಬಿಗೆ ಸಾಟಿ ಇಲ್ಲವಂತೆ

ದೇವ ಲೋಕ ನಡುಗಿತಂತೆ
ದೇವ ರಾಜ ಭೀತಿಗೊಂಡ

ತನ್ನ ಸ್ಥಾನ ಶಿಬಿಗೆ ಸಿಕ್ಕಿ
ತಾನು ರಾಜ್ಯ ಕಳೆದುಕೊಂಡು
ಹಾದಿ ಬೀದಿ ಅಲೆವಚಿಂತೆ
ಅವನ ಮನವ ಕಾಡಿತು

ಶಿಬಿಯ ವ್ರತಕೆ ಭಂಗ ತರಲು
ದೇವ ರಾಜ ಗಿಡುಗ ನಾದ
ಅಗ್ನಿಯಾದ ಪಾರಿವಾಳ
ಭರದಿ ಹಾರಿ ಬಂದವು

ಗಿಡಗ ತಾನು ಎರಿಗಿತಾಗ
ಪಾರಿವಾಳ ಹಾರಿ ಬಂದು
ಗಡ ಗಡನೆ ನಡುಗಿ ತಾನು
ಶಿಬಿಯ ಬಳಿಗೆ ವಾಲಿತು

ಶಿಬಿಯು ಆಗ ನಡೆಯುತಿದ್ದ
ಶಿಬಿರ ದಾಚೆ ಸಂಜೆ ಗಾಳಿ
ಸವಿಯಲೆಂದು ಬಂದು
ನಿಂತ ಮರದ ಬಳಿಯಲಿ

ಬಾನಿ ನಿಂದ ಭರದಿ ಬಂದು
ಭಯದಿ ನಡುಗಿ ಪಾರಿವಾಳ
ಶಿಬಿಯ ಕಾಲ ಬಳಿಯೆ
ಬಿದ್ದು ಜೀವದಾನ ಬೇಡಿತು

ಗಿಡುಗ ಹಕ್ಕಿ ರೋಷದಿಂದ
ಅದರ ಮೇಲೆ ಎರಗಿ ಬರಲು

ಶಿಬಿಯ ಬೇಗ ಎತ್ತಿ ಕೊಂಡು
ಅಭಯ ನೀಡಿ ತಣಿಸಿದ

ಪಾರಿವಾಳ ನನ್ನ ಊಟ
ಅದರ ತೂಕ ನಿನ್ನ ಮಾಂಸ
ಕೊಡುವೆ ಎನೆ ಬಿಡುವೆ
ಅದನು ಎಂದಿತಾಗ ಗಿಡುಗನು

ಅಭಯ ವಿತ್ತ ಜೀವಿಗಾಗಿ
ಒಡಲ ಮಾಂಸ ಕೊಡಲು
ಶಿಬಿಯು ತೊಡೆಯ ಬಳಿಯ
ಮಾಂಸ ಕೊಯ್ದು ತೂಕಕಿಟ್ಟನು

ಹಕ್ಕಿ ತೂಕ ಏರಲಿಲ್ಲ
ತ್ರಾಸ ಸಮ ವಾಗಲಿಲ್ಲ
ಮತ್ತೆ ಮತ್ತೆ ಕೊಯ್ದು ಕೊಯ್ದು
ಮಾಂಸ ತೂಕ ಕ್ಹಾಕಿದ

ಶಿಬಿಯ ದೇಹ ಬಳಲಿತಾಗ
ಭುವಿಗೆ ಬಿದ್ದು ಹೊರಳಿದ
ನನ್ನ ದೇಹಪೂರ ತಿಂದು
ಗಿಡಗ ನೀನು ತೃಪ್ತಿಹೊಂದು

ಶಿಬಿಯ ಮಾತು ಕೇಳಿ ಇಂದ್ರ
ತನಗೆ ತಾನೆ ಮೆಚ್ಚಿ ಕೊಂಡ
ಪರರ ಜೀವ ಉಳಿಸಲೆಂದು
ತನ್ನ ದೇಹ ತೆತ್ತತ್ಯಾಗಿ

ದಯಾವಂತ ಶಿಬಿಯೆ ಕೇಳು
ಪಾರಿವಾಳ ಗಿಡಗವಲ್ಲ

ನಾವು ಇಂದ್ರ ಅಗ್ನಿಯು
ನಿನ್ನ ಪರಿಕೆಸೆ ಬಂದೆವು

ನೀನು ಘನನು ಮಹಾತ್ಯಾಗಿ
ನಿನ್ನ ಮಹಿಮೆ ಮರೆಯಲಿ
ವರವ ಕೇಳು ಕೊಡುವೆ ವೆಂದು
ನಿಜವ ತೋರಿ ನಿಂತರು

ಶಿಬಿಯು ಎದ್ದು ಕೈಯ್ಯ
ಮುಗಿದು ಧನ್ಯನಾದೆ ನಿಮ್ಮ ನೋಡಿ
ಜೀವಿಗಳಿಗೆ ಅಭಯ ನೀಡಿ
ಇದೇ ನನ್ನ ಬೇಡಿಕೆ

ಶಿಬಿಯ ತ್ಯಾಗ ಮೂರುಲೋಕ
ಮೆಚ್ಚಲೆಂದು ಹಾಡಿ ಹರಸಿ
ಇಂದ್ರ ಅಗ್ನಿ ಮಾಯವಾಗಿ
ಬೆಳಕ ಚೆಲ್ಲಿ ಹೋದರು

ಪುಟ್ಟ ಮಕ್ಕಳೆಲ್ಲ ನೀವು
ಶಿಬಿಯ ಕಥೆಯ ಕೇಳಿ ಬಾಳಿ
ಪ್ರಾಣಿಗಳಲಿ ದಯೆಯ ತೋರಿ
ಜಾಣರಾಗಿ ಬೆಳೆಯಿರಿ

ರಚಿಸಿದ್ದು ಜಗ್ಗುಪ್ರಿಯದರ್ಶಿನಿ

# ಸತ್ತ ಕವಿಗೆ ಸನ್ಮಾನ

ಹತ್ತಿದ್ದ ಧೂಳ ಕೊಡವಿ
ಮತ್ತೆ ಜೋಡಿಸಿಡುವ ನನ್ನ
ದಿನನಿತ್ಯದ ಕರ್ಮವ ಕಂಡು
ನನ್ನ ಮಡದಿ ಬೇಸತ್ತು ಬೈದು

"ಸುಡಿ ನಿಮ್ಮ ಸಾಹಿತ್ಯವ"
ಎಂದು ಸಿಡುಕಿದ್ದುಂಟು ॥

ಹಸಿವು–ಹಸಿವೆಂದು ಕೂಗಿಡುವ
ಮಡದಿ ಮಕ್ಕಳ ಗೋಳಿಗೆ
ಓ ಗೊಡದೆ ಕಡು ಬಡತನದಿ
ಕಡೆತನಕ ಬರೆದು ಕೊನೆಯುಸಿರೆಳೆದೆ ॥

ಇದ್ದಾಗ ಕವಿಯ ಕೇಳುವವರಿಲ್ಲ
ಸಾಹಿತ್ಯ ಸಭೆಗಳು ನಗರಗಳಲಿ,
ಕುಗ್ರಾಮ ಕವಿಗೆ ಆಹ್ವಾನವೆಲ್ಲಿ?
ಕಡೆಗವನ ಆಸೆ ಭಸ್ಮ ಮಸಣದಲ್ಲಿ ॥

ಆ...ಹಾ! ಸೋಜಿಗವಿದೇನು!
ಎಂದೂ ಯಾರ ಕಣ್ಣಿಗೂ ಬೀಳದ
ಈ ನಮ್ಮ ಕುಗ್ರಾಮ ಬಡಹಳ್ಳಿ
ಇಂದೇನು ಇಂದ್ರನಗರಿಯಾಗಿದೆ! ॥

ದಾರಿಯುದ್ದಕ್ಕೂ ತಳಿರುತೋರಣ
ಎತ್ತರದ ವೇದಿಕೆಯಾ ವೈಭವವೇನು!
ಮಹಾಮಹಾಗಣ್ಯರು ತುಂಬಿದ
ಈ ಸಭಾಂಗಣವೇನು! ॥

ಓ... ಹೋ–ಅದೋ ಅಲ್ಲಿ ಏನೋ
ಬರೆದ ಫಲಕವಿದೆ – ಅದೇನು?
"ಸತ್ತ ಕವಿಗೆ ಹುಟ್ಟೂರಿನಲಿ ಸನ್ಮಾನ"
ಯಾರವನು ಕವಿ?
ಇದೇನು ನನ್ನದೇ ಹೆಸರು? ॥

ಅದೋ–ವೇದಿಕೆಯ ಮೇಲೆ ಮಡದಿ
ಕುಗ್ಗಿ ಬಗ್ಗಿ ಕುಳಿತಿಹಳು

ಅವಳ ಕೈಗಿತ್ತರು ಮರಣೋತ್ತರ
ಗೌರವ ಪ್ರಶಂಸಾ ಪತ್ರ
ಸಭೆಯ ಕರತಾಡನ ಮೊಳಗಿತು ॥

ಸತಿನಿಂತು ಇಂತು ನುಡಿದಳು
ಸತ್ತ ಕವಿಗೆ ಈ ಸನ್ಮಾನವೇಕೆ?
ಇದ ಕೊಳ್ಳಿ, ಇರುವ ವರಕವಿಯ
ಅರಿತು ಬರಮಾಡಿ ಗೌರವಿಸಿ ॥

ಎನ್ನ ಮಡದಿಯ ಮಾತು ಮಾಣಿಕ್ಯ
ಭಲೇ, ಸತೀ ಶಿರೋಮಣಿ
ಭಲೇ, ಭಾಪುರೇ, ಭೇಷ್
ಎಂದು ಮೆಚ್ಚಿ ಮರಳಿದೆ ॥

**ರಚಿಸಿದ್ದು ಜಗ್ಗುಪ್ರಿಯದರ್ಶಿನಿ**

# ಶ್ರೀ ನೃಸಿಂಹಮಂಗಳಂ

ಮಂಗಳವು ಶ್ರೀ ನಾರಸಿಂಹಗೆ ಬೆಟ್ಟದೊಡೆಯಗೆ ಮಂಗಳ
ಯೋಗಾರೂಢಗೆ ಮಂಗಳ ಪ್ರಹ್ಲಾದವರದಗೆ ಮಂಗಳ
ರಕ್ಕಸ ಸಂಹಾರಗೆ ಮಂಗಳ ಭಕ್ತಪ್ರಿಯನಿಗೆ ಮಂಗಳ
ಕಲ್ಯಾಣಿತಟವಾಸಗೆ ಮಂಗಳ ಯಾದವಗಿರಿನಾಥಗೆ ಮಂಗಳ
ಹತ್ತಾವತಾರಗೆ ಮಂಗಳ ಅಭಿಷೇಕಪ್ರಿಯನಿಗೆ ಮಂಗಳ
ಶ್ರೀನಾರಸಿಂಹಗೆ ಮಂಗಳ